ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 57 ಚಾಸಾ- 67**

ಸಾಕ್ಷಿದಾರರ ಹೆಸರುಃ : ಮದನ್

ತಂದೆಯ ಹೆಸರುಃ : ಹೆಚ್ ಎನ್ ರಾಮಚಂದ್ರ

ವಯಸ್ಸುಃ : 42 ವರ್ಷ

ಉದ್ಯೋಗಃ : ವ್ಯಾಪಾರ

ವಾಸ : ಚನ್ನರಾಯಪಟ್ಟಣ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 11-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಕಳೆದ 20-22 ವರ್ಷಗಳಿಂದ ಚನ್ನರಾಯಪಟ್ಟಣದಲ್ಲಿ ಗಾಯತ್ರಿ ಸಿಮೆಂಟ್ ಅಂಗಡಿಯನ್ನು ನಡೆಸುತ್ತಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಆರೋಪಿತರು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಕೆಲಸದಲ್ಲಿದ್ದರು. ಯಾವ ಕೆಲಸ ಎಂದು ನನಗೆ ಗೊತ್ತಿಲ್ಲ. ಅವರು ಹಣದ ಲೇವಾದೇವಿ ವ್ಯವಹಾರ ಮಾಡುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ನಾನು ಅವರೊಂದಿಗೆ ಯಾವುದೇ ಹಣದ ವ್ಯವಹಾರ ಮಾಡುತ್ತಿರಲಿಲ್ಲ, ನಾನು ಆರೋಪಿತರಿಂದ 43ಸಾವಿರ ರೂಪಾಯಿ ಹಣವನ್ನು ಪಡೆದುಕೊಂಡಿರುತ್ತೇನೆ ಮತ್ತು ಅದರ ಮರುಪಾವತಿಗಾಗಿ ಅವರ ಕೆನರಾಬ್ಯಾಂಕ್ ಖಾತೆಯ ಚೆಕ್ ಮೂಲಕ ನೀಡಿರುತ್ತಾರೆ, ಆ ಹಣವನ್ನು ನಾನು ನಗದಾಗಿ ಮರುಪಾವತಿಸಿರುತ್ತೇನೆಂದು ಪೊಲೀಸರಿಗೆ ಹೇಳಿಕೆ ನೀಡಿಲ್ಲ

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು

ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು **ಭಾಗಶಃ** ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಆರೋಪಿತರು ಕೆ ಎಸ್ ಆರ್ ಟಿ ಸಿ ಯಲ್ಲಿ ನಿರ್ವಾಹಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಹಣದ ಲೇವಾದೇವಿ ವ್ಯವಹಾರ ಕೂಡ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರ ಭಾವ ಮಾಡುತ್ತಿದ್ದರು ಎನ್ನುತ್ತಾರೆ. ಜೂನ್ 2008ರಲ್ಲಿ ನನಗೆ ಹಣಕಾಸಿನ ತೊಂದರೆ ಇದ್ದುದರಿಂದ ನಾನು ಆರೋಪಿತರಿಂದ 43ಸಾವಿರ ರೂಪಾಯಿ ಸಾಲ ಪಡೆದಿದ್ದೆನು ಎಂದರೆ ಸರಿಯಲ್ಲ. ಅದನ್ನು ಅವರು ನನಗೆ ಚೆಕ ಮೂಲಕ ಕೊಟ್ಟಿದ್ದರು ಮತ್ತು ನಾನು ಅದನ್ನು ಜುಲೈ 2008ರಲ್ಲಿ ನಗದಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಇದೇ ರೀತಿ ಹಲವಾರು ಬಾರಿ ನಾನು ಅವರಿಂದ ಹಣವನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಅವರ ಭಾವ ಬಾಲಕೃಷ್ಣ ಎಂಬುವವರು ಧನಲಕ್ಷ್ಮೀ ಫೈನಾನ್ಸ್ ನಡೆಸುತ್ತಿದ್ದರು, ಅವರಿಂದ ನಾನು ಸಾಲ ಪಡೆದಿರುತ್ತೇನೆ ಎನ್ನುತ್ತಾರೆ. ಈ ವಿಚಾರವಾಗಿ ನಾನು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-97 ಎಂದು ಗುರುತಿಸಲಾಯಿತು. ಆರೋಪಿತರಿಂದ ಸಾಲ ಪಡೆದಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ**

ಧನಲಕ್ಷ್ಮೀ ಫೈನಾನ್ಸ್ ನನ್ನ ಗಾಯತ್ರಿ ಸಿಮೆಂಟ್ಸ್ ಅಂಗಡಿ ಪಕ್ಕದಲ್ಲಿ ಇದೆ ಎಂದರೆ ನಿಜ. ಸದರಿ ಧನಲಕ್ಷ್ಮೀ ಫೈನಾನ್ಸ್‌ನ್ನು ಬಾಲಸುಬ್ರಹ್ಮಣ್ಯಗೌಡ ಎಂಬುವವರು ನಡೆಸುತ್ತಿದ್ದರು ಎಂದರೆ ನಿಜ. ಅವರು ಆರೋಪಿತರ ಭಾವ ಎಂದರೆ ನಿಜ. ಅಲ್ಲಿ ನಾನು ಚೀಟಿ ಹಾಕಿದ್ದೆನು ಅದನ್ನು ಪ್ರತಿತಿಂಗಳು ಕಟ್ಟುತ್ತಿದ್ದೆನು ಎನ್ನುವುದು ನಿಜ. ಆ ಚೀಟಿ ಮುಕ್ತಾಯಗೊಂಡ ನಂತರ

43ಸಾವಿರ ರೂಪಾಯಿ ನನಗೆ ಬಂದಿರುತ್ತದೆ ಎಂದರೆ ನಿಜ. ಬಾಲಸುಬ್ರಹ್ಮಣ್ಯಗೌಡರವರು ಕೊಲೆಯಾಗಿ ತೀರಿಕೊಂಡರೆಂದರೆ ನಿಜ. ಅವರ ಕೊಲೆಯಾದ ನಂತರ ಆರೋಪಿತರು ಆ ಧನಲಕ್ಷ್ಮೀ ಫೈನಾನ್ಸ್ ನ್ನು ನೋಡಿಕೊಳ್ಳುತ್ತಿದ್ದರೆನ್ನುವುದು ನಿಜ. ನನ್ನ ಚೀಟಿ ಹಣವನ್ನು ನಾನು ಕಾನೂನುಬದ್ಧವಾಗಿ ಪಡೆದಿರುತ್ತೇನೆ ಎಂದರೆ ನಿಜ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**